ಇನ್‌ಸ್ಪೆಕ್ಟರ್ ಮಾತಿಗೆ 'ಇಲ್ಲ ಸ್ವಾಮಿ. ಮನೇಲೇ ಹೋಗಿ ಕುಡಿಯುತ್ತೀನಿ' ಎಂದ. 'ಸರಿ. ನೀವಿನ್ನು ಹೋಗಿ. ಕರೆದಾಗ ಮತ್ತೆ ಬರಬೇಕಾಗುತ್ತೆ. ನಮ್ಮ ಅನುಮತಿ ಇಲ್ಲದೆ ಯಾವ ಊರಿಗೂ ಹೋಗುವ ಹಾಗಿಲ್ಲ' ಎನ್ನುವ ಮಾತು ಅವನನ್ನು ಇನ್ನಷ್ಟು ವಿಚಲಿತನನ್ನಾಗಿ ಮಾಡಿತು. 'ಒಂದು ಕಳ್ಳತನ ಮಾಡಲಿಲ್ಲ. ಕೊಲೆ ಮಾಡಲಿಲ್ಲ. ಸ್ಟೇಷನ್ನಿಗೆ ಬರುವ ಹೊತ್ತು ಯಾಕೆ ಬಂತಪ್ಪ. ಎಲ್ಲಾ ಗ್ರಹಚಾರ' ಎಂದು ಮನಸ್ಸಿನಲ್ಲಿ ಬೈದುಕೊಂಡು ಹೊರನಡೆದ.

* * *

ಇವನು ಈ ಕಡೆ ಅಬ್ಬಿನಹೊಳೆಯಿಂದ ಬಸ್ಸನ್ನು ಏರಿ ಮನೆಯನ್ನು ಸೇರಿದ್ದನೋ ಇಲ್ಲವೋ ಆ ಕಡೆ ಅಬ್ಬಿನಹೊಳೆ ಸ್ಟೇಷನ್ ಬಳಿ ಜನವೋ ಜನ. ಶಿವನಂಜಯ್ಯನ ಹೊಲದಲ್ಲಿ ಸಿಕ್ಕ ಆ ಲೋಹದ ಜಿಂಕೆಯ ವಿಷಯ ಗಾಳಿಗಿಂತಲೂ ವೇಗದಲ್ಲಿ ಹಬ್ಬಿ ರಾಜ್ಯ, ದೇಶ, ಹೊರದೇಶಗಳೆನ್ನದೆ ಅಂತರರಾಷ್ಟ್ರೀಯ ನ್ಯೂಸ್ ಆಗಿತ್ತು. ಜನಗಳನ್ನು ಕಂಟ್ರೋಲ್ ಮಾಡಲು ಆಗದೆ ಸ್ಟೇಷನ್ ಸುತ್ತ ಕರ್ಫ್ಯೂ ಹೇರಲಾಗಿತ್ತು. ಆದರೆ ಟಿ.ವಿ.ಯವರು ತಮ್ಮ ಕ್ಯಾಮೆರಾಗಳಿಂದ ಆ ಲೋಹದ ಜಿಂಕೆಯ ಚಿತ್ರೀಕರಣ ಮಾಡಲು ಮುಗಿಬಿದ್ದಿದ್ದರು. ಚಿತ್ರೀಕರಣ ಮಾಡುವ ಸಂದರ್ಭದಲ್ಲಿ ಯಾರೋ ಒಬ್ಬ 'ಅದಕ್ಕೆ ಎಡಕಿವಿಯೇ ಇಲ್ಲವಲ್ಲ. ಕತ್ತರಿಸಲಾಗಿದೆ. ಯಾರೋ ಅದರ ಎಡಕಿವಿಯನ್ನು ಕಡಿದುಕೊಂಡಿದ್ದಾರೆ' ಎಂದ.

ಇನ್‌ಸ್ಪೆಕ್ಟರ್ 'ಹೌದಲ್ವಾ! ನಮ್ಮ ಕಣ್ಣಿಗೆ ಕಾಣಲೇ ಇಲ್ಲ' ಎಂದು 'ರೀ ಜವರಯ್ಯ ಇಲ್ಲಿಗೆ ತರುವಾಗಲೇ ಹೀಗೆ ಇತ್ತೇನ್ರಿ' ಕೇಳಿದರು ಪೇದೆ ಜವರಯ್ಯನಿಗೆ. 'ನಮ್ಮ ಕಣ್ಣಿಗೆ ಬೀಳಲೇ ಇಲ್ಲ, ಇದ್ದಂಗೆ ಕಾಣಲಿಲ್ಲ ಸಾರ್' ಎಂದ. ಇದು ಇನ್ನೂ ದೊಡ್ಡ ಸುದ್ದಿಯಾಯ್ತು.

* * *

ಅಬ್ಬಿನಹೊಳೆಯಿಂದ ನೇರ ಬಸ್ಸನ್ನು ಹತ್ತಿಕೊಂಡು ಆರು ಕಿಲೋ ಮೀಟರ್ ದೂರವಿರುವ ತನ್ನ ಊರಿಗೆ ಬಂದ. ಈ ಊರಲ್ಲೂ ಜನ ಕಿಕ್ಕಿರಿದು ತುಂಬಿಹೋಗುತ್ತಿತ್ತು. ಇದ್ಯಾವುದನ್ನು ಗಮನಿಸದೆ ಸ್ಟ್ಯಾಂಡಿನಲ್ಲಿ ಬಸ್ಸನ್ನು ಇಳಿದವನೇ ನೇರ ಮನೆಗೆ ಹೋದ. ಹೆಂಡತಿ ಹಾಗೂ ಮಗಳು ಕಲ್ಲಮ್ಮ ಇವನನ್ನೇ ಕಾಯುತ್ತಾ ಇದ್ದರು. ತುಂಬಾ ಬೆವೆತಿದ್ದರಿಂದ ಹಾಗೂ ದಣಿವಾಗಿದ್ದುದರಿಂದ ಮುಖ ತೊಳೆದುಕೊಂಡು ಚಾಪೆ ಹಾಸಿಕೊಂಡವನೇ ಅದರ ಮೇಲೆ ಮಲಗಿದ. ಆದರೆ, ಅವನನ್ನು ಮಲಗಲು ಬಿಡದೆ ಊರಿನ ಜನ ಒಬ್ಬೊಬ್ಬರೇ ಅವನ ಮನೆ ಮುಂದೆ ಜಮಾಯಿಸಿದರು. ಬಂದವರು ತಲೆಗೊಂದರಂತೆ 'ಅದಕ್ಕೆ ವಜ್ರದ ಕಣ್ಣುಗಳಂತೆ ಹೌದಾ, 'ಅದರ ಎಡ ಕಿವಿಯನ್ನು ಯಾರೋ ಕತ್ತರಿಸಿಕೊಂಡಿದ್ದಾರಂತೆ', 'ನಮಗೆ ಒಂದು ಕಿವಿ ಸಿಕ್ಕಿದ್ದರೆ ನಮ್ಮ ಬದುಕು ಬಂಗಾರ ಆಗ್ತಿತ್ತು' ಎಂದು ಮಾತಾಡಿಕೊಳ್ಳುತ್ತಿದ್ದರು. ಈ ಮಾತುಗಳು ಅವನನ್ನು ಇನ್ನಷ್ಟು ದಿಗಿಲು ಮಾಡಿದವು. ಥಟ್ಟನೆ ಎದ್ದು ಕೂತ. ಅವನನ್ನೇ ನೋಡಿಕೊಂಡು ಪಿಸುಮಾತಲ್ಲಿ ಅವನ ಹೆಂಡತಿ, 'ನೀನೊಂದು ಕಿವಿಯಾದ್ರು ಕತ್ತರಿಸಿ ಕೊಳ್ಳಬಾರದಿತ್ತಾ? ಯಾಕಂತೆ? ನಮ್ಮ ಹೊಲದಾಗೆ ಅಲ್ಲವೆ ಸಿಕ್ಕರೋದು ಅದು? ಒಂದು ಕಿವಿಯಾದರೂ ಕತ್ತರಿಸಿಕೊಂಡಿದ್ದರೆ ಕಲ್ಲಮ್ಮನ ಮದುವೇನ ಈ ಬೇಸಿಗೆಗೆ ಮಾಡಬಹುದಿತ್ತು' ಎಂದಳು. ಹೊರಗಡೆ ಜನ ತಮಗೆ ತೋಚಿದಂತೆ ಮಾತಾಡಿಕೊಳ್ಳುತ್ತಿದ್ದರು. ಗುಂಪಿನಿಂದ ತಲೆಗೊಂದರಂತೆ ತೇಲಿಬರುತ್ತಿದ್ದ ಮಾತಿನ ಅಲೆಗಳು ಇವನ ಕಿವಿಯ ದಡಕ್ಕೆ ಬಡಿದು ಹೋಗುತ್ತಾ ಇವನನ್ನು ಇನ್ನಷ್ಟು ವಿಚಲಿತನನ್ನಾಗಿ ಮಾಡುತ್ತಿದ್ದವು: ಒಂದು ಧ್ವನಿ, 'ಬಾಲವಾದರೂ ಸಿಕ್ಕಿದ್ದರೆ' ಎಂದರೆ, ಮತ್ತೊಂದು 'ಒಂದು ಕಾಲನ್ನಾದರೂ ಕಡಿದುಕೊಳ್ಳಬಹುದಿತ್ತು' ಎಂದಿತು. ಇನ್ನೊಂದು, 'ಪನ್ನೇಶಿ ಪದ್ದೇಶಿ ಅಂತೆ ಮರಕೊಯ್ಯಲು ಹೋಗಿದ್ದು. ಅವರಿಗೆ ಇನ್ನು ಏನೇನು ಸಿಕ್ಕಿದೆಯೋ ಏನೋ' ಅಂದಿತು. ಹೀಗೆ ತಲೆಗೆ ಒಂದೊಂದು ಮಾತು. ಆದರೆ ಈ ಮಾತುಗಳು ಸಣ್ಣ ಶಿವನಂಜಯ್ಯನ ಹೊಟ್ಟೆಗೆ ಬೆಂಕಿಬಿದ್ದ ಹಾಗೆ ಮಾಡಿದ್ದವು. ಜೊತೆಗೆ ಇನ್‌ಸ್ಪೆಕ್ಟರ್ ಹೇಳಿದ ಜೈಲು ವಾಸ ನೆನೆಸಿಕೊಂಡ.

* * *

ಕೇವಲ ಒಂದು, ಒಂದೂವರೆ ದಿನದಲ್ಲಿ ಈ ರೀತಿಯ ಆಶ್ಚರ್ಯಕರ ರೀತಿಯಲ್ಲಿ ಘಟನೆಗಳು ಜರುಗುತ್ತಿರುವುದು ಕಂಡು ಊರಿನ ಜನ ತಬ್ಬಿಬ್ಬಾದರು. ಕೆಲವರು ತಮ್ಮ ತಮ್ಮ ಹೊಲಗಳಲ್ಲಿದ್ದಂತಹ ಮರಗಳನ್ನು ಕಡಿಸಿ ತಮಗೂ ಯಾವುದಾದರೂ ಇಂತಹ ನಿಧಿ